ವಕೀಲರು. ಅವರಿಗೆ ಕುಡಿಯುವ ಅಭ್ಯಾಸ ಇಲ್ಲ. ಆದರೆ ಪೋಲಿಸಿನವರು ಇಷ್ಟು ಕೇಸ್‌ಗಳು ತಿಂಗಳಲ್ಲಿ ಹಾಕಲೇಬೇಕು ಎಂದು ಹೇಳಿ ಅವರನ್ನು ಹಿಡಿದಿದ್ದಾರೆ. ಆಮೇಲೆ ರಾತ್ರಿ 11.30 ಗಂಟೆಯಲ್ಲಿ ಕರೆದುಕೊಂಡು ಹೋಗಿ ಚಕ್ ಮಾಡಿಸಿದರೆ ಅವನು ಕುಡಿದಿಲ್ಲ. ಆದ್ದರಿಂದ ಕಾನೂನನ್ನು ಇಲ್ಲಿ ಮಿಸ್‌ಯೂಸ್ ಆಗದಂತೆ ನೋಡಬೇಕಾಗುತ್ತದೆ.

ಶ್ರೀ. ಕಾಗೋಡು ತಿಮ್ಮಪ್ಪ: ಆಯಿತು.

ಉಪಾಧ್ಯಕ್ಷರು: ಪ್ರಸ್ತಾವ ಎನೆಂದರೆ 'ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2001ನೇ ಸಾಲಿನ ಕರ್ನಾಟಕ ಧೂಮಪಾನನಿಷೇಧ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ವಿಧೇಯಕವನ್ನು ಪರ್ಯಾಲೋಚಿಸುದು'.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು)

ಖಂಡ 2ರಿಂದ 15 ರವರೆಗೆ, ಎರಡೂ ಸೇರಿದಂತೆ,

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಖಂಡ 2ರಿಂದ 15ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 15ರವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೇ ಖಂಡ ಶೀರ್ಷಿಕೆ ಪಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೇ ಖಂಡ ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರದ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವ ಅಂಗೀಕಾರ

ಶ್ರೀ. ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2001ನೇ ಸಾಲಿನ ಕರ್ನಾಟಕ ಧೂಮಪಾನ ನಿಷೇಧ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ವಿದೇಯಕವನ್ನು ಈ ಸಭೆಯ ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2001ನೇ ಸಾಲಿನ ಕರ್ನಾಟಕ ಧೂಮಪಾನ ನಿಷೇಧ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ವಿದೇಯಕವನ್ನು ಈ ಸಭೆಯ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಉಪಾಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ.

16. ಪ್ರಕಟಣೆ

ವಿಷಯ: ಮ್ಯಾಂಚಿಸ್ಟರ್‌ನಲ್ಲಿ ನಡೆದ 17ನೇ ಕಾಮನ್‌ವೆಲ್ತ್ ಕ್ರೀಡಾ ಕೂಟದಲ್ಲಿ ಶ್ರೇಷ್ಠ ಮಟ್ಟದ ಪ್ರದರ್ಶನ ನೀಡಿದ ಭಾರತೀಯ ಕ್ರೀಡಾಪಟುಗಳಿಗೆ ಅಭಿನಂದನೆ ಸಲ್ಲಿಸುವುದು.

ಉಪಾಧ್ಯಕ್ಷರು: ಮ್ಯಾಂಚೆಸ್ಟರ್‌ನಲ್ಲಿ ನಡೆದ 17ನೇ ಕಾಮನ್‌ವೆಲ್ತ್ ಕ್ರೀಡಾ ಕೂಟದಲ್ಲಿ 72 ಸಂಯುಕ್ತ ರಾಷ್ಟ್ರಗಳು ಭಾಗವಹಿಸಿದ್ದು, ನಮ್ಮ ದೇಶದಿಂದ 148 ಕ್ರೀಡಾಪಟುಗಳು ಮ್ಯಾಂಚೆಸ್ಟರ್‌ನಲ್ಲಿ ಭಾಗವಹಿಸಿ 32 ಸ್ವರ್ಣ ಪದಕ, 21 ಬೆಳ್ಳಿ ಪದಕ ಹಾಗೂ 19 ಕಂಚಿನ ಪದಕಗಳನ್ನು ಸೇರಿ ಒಟ್ಟು 72 ಪದಕಗಳನ್ನು ನಮ್ಮ ದೇಶಕ್ಕೆ ದೊರಕಿಸಿದ್ದು, ನಮ್ಮ ದೇಶದ ಗೌರವವನ್ನು ಎತ್ತಿ ಹಿಡಿದು, ಅತಿ ಹೆಚ್ಚು ಪದಕ ಗಳಿಸಿದ ರಾಷ್ಟ್ರಗಳ ಸಾಲಿನಲ್ಲಿ 3ನೇ ಸ್ಥಾನಗಳಿಸಿ ನಮ್ಮ ದೇಶಕ್ಕೆ ಗೌರವವನ್ನು ಸಂಪಾದಿಸಿದ ನಮ್ಮ ಕ್ರೀಡಾಪಟುಗಳ ಸಾಧನೆಯನ್ನು ಹೆಮ್ಮೆಯಿಂದ ಹೇಳಿಕೊಳ್ಳಲು ಇಚ್ಛಿಸುತ್ತೇನೆ. ಮೊದಲನೇ ಸ್ಥಾನದಲ್ಲಿ ಆಸ್ಟ್ರೇಲಿಯ ಒಟ್ಟು 206 ಪದಕಗಳು, ಎರಡನೇ ಸ್ಥಾನದಲ್ಲಿ ಇಂಗ್ಲೆಂಡ್ 165 ಪದಕಗಳನ್ನು ಗಳಿಸಿದ್ದು, ನಮ್ಮ ರಾಷ್ಟ್ರ 3ನೇ ಸ್ಥಾನದಲ್ಲಿದೆ. ನಮ್ಮ ದೇಶದ ಷೂಟರ್‌ಗಳಾದ ಯಶ್‌ಪಾಲ್ ರಾಣಾ, ಅಂಜಲಿ ಭಾಗವತ್, ವೈಟ್ ಲಿಫ್ಟರ್‌ಗಳಾದ ಕುಂಜು ರಾಣಿ ದೇವಿ, ಸನಮಾಚ ಚಾನು, ಸುದೀಪ್ ಕುಮಾರ್ ಮತ್ತು ಪದಕಗಳಿಸಿರುವ ಎಲ್ಲಾ ಕ್ರೀಡಾಪಟುಗಳ ಸಾಧನೆಯನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ, ಜೊತೆಗೆ ನಮ್ಮ ದೇಶಕ್ಕೆ ಇತಿಹಾಸವನ್ನೇ ಸೃಷ್ಟಿಸಿರುವ ಮಹಿಳಾ ಹಾಕಿಪಟುಗಳ ಸಾಧನೆ ಶ್ರೇಷ್ಠಮಟ್ಟದ್ದು. ಈ ಎಲ್ಲಾ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ಪರವಾಗಿಯೂ ಮತ್ತು ತಮ್ಮೆಲ್ಲರ ಪರವಾಗಿಯೂ ನನ್ನ ಹಾರ್ದಿಕ ಅಭಿನಂದನೆಗಳು.

ಕರ್ನಾಟಕ ರಾಜ್ಯದಿಂದ ಭಾರತೀಯ ತಂಡದಲ್ಲಿ ಮ್ಯಾಂಚೆಸ್ಟರ್‌ನಲ್ಲಿ ಭಾಗವಹಿಸಿ ಪದಕಗಳಿಸಿದ ಹೆಲೆನ್ ಮೇರಿ -ಹಾಕಿ (ಚಿನ್ನದ ಪದಕ), ಸುದೀಪ್ ಕುಮಾರ್-ವೈಟ್ ಲಿಫ್ಟಿಂಗ್ (ಕಂಚಿನ ಪದಕ), ಅಪರ್ಣ ಪೊಪೆಟ್-ಬ್ಯಾಡ್ಮಿಂಟನ್ (ಕಂಚಿನ ಪದಕ), ಚೇತನ್ ಪಿ,ಬಬ್ಬೂರ್-ಟೇಬಲ್ ಟೆನ್ನಿಸ್ (ಕಂಚಿನ ಪದಕ). ಇವರುಗಳು ನಮ್ಮ ರಾಜ್ಯಕ್ಕೆ ಕೀರ್ತಿ ತಂದಿರುವ ಹೆಮ್ಮೆಯ ಕ್ರೀಡಾಪಟುಗಳಿಗೆ ನಮ್ಮ ರಾಜ್ಯ ಸರ್ಕಾರದ ಪರವಾಗಿಯೂ ಮತ್ತು ತಮ್ಮೆಲ್ಲರ ಪರವಾಗಿಯೂ ನನ್ನ ಹಾರ್ದಿಕ ಅಭಿನಂದನೆಗಳು.

ಪದಕ ಗಳಿಸದಿದ್ದರು ತಮ್ಮ ತಮ್ಮ ಕ್ರೀಡೆಗಳಲ್ಲಿ ಶ್ರೇಷ್ಠ ಮಟ್ಟದ ಪ್ರದರ್ಶನ ನೀಡಿದ ಎಲ್ಲಾ ಭಾರತೀಯ ಕ್ರೀಡಾಪಟುಗಳಿಗೆ ತಮ್ಮೆಲ್ಲರ ಪರವಾಗಿಯೂ ಮತ್ತು ರಾಜ್ಯ ಸರ್ಕಾರದ ಪರವಾಗಿಯೂ ನನ್ನ ಹಾರ್ದಿಕ ಅಭಿನಂದನೆಗಳು.

+ಶ್ರೀ. ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ನಾನು ಮತ್ತು ಶ್ರೀ ಶಿವಾನಂದ ಪಾಟೀಲರು, ಮತ್ತು ಮಾನ್ಯ ವಿರೋಧಪಕ್ಷದ ನಾಯಕರು ಇವತ್ತು ಬೆಳಗ್ಗೆ ಪ್ರಸ್ತಾಪ ಮಾಡಬೇಕೆಂದು ಎಕೆ ಬಯಸಿದೆವು ಅಂದರೆ ಅಭಿನಂದನೆಗಳನ್ನು ಸಲ್ಲಿಸತಕ್ಕಂಥಾದ್ದು. ಒಂದು ಭಾಗ ಇದನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕಾಗಿತ್ತು. ಈಗ ಆಂಧ್ರ ಪ್ರದೇಶದ ಮುಖ್ಯ ಮಂತ್ರಿಗಳು ಆಂಧ್ರ ಪ್ರದೇಶದಿಂದ ಯಾರು ಕ್ರೀಡಾಪಟುಗಳು ಕಾಮನ್‌ವೆಲ್ತ್‌ನಲ್ಲಿ ಭಾಗವಹಿಸಿದ್ದಾರೆ ಅವರೆಲ್ಲರನ್ನೂ ಹೈದ್ರಾಬಾದ್‌ಗೆ ಕರೆಸಿ ಸತ್ಕಾರ ಮಾಡಿ ಯಾರು ಬೆಳ್ಳಿ ಪದಕ ಗಳಿಸಿದ್ದಾರೆ, ಯಾರು ಚಿನ್ನದ ಪದಕ ಗಳಿಸಿದ್ದಾರೆ, ಯಾರು ಕಂಚಿನ ಪದಕ ಗಳಿಸಿದ್ದಾರೆ ಅವರಿಗೆಲ್ಲಾ 20 ಲಕ್ಷ ರೂಪಾಯಿ, 10 ಲಕ್ಷ ರೂಪಾಯಿ ಮತ್ತು 5 ಲಕ್ಷ ರೂಪಾಯಿಗಳ ಪ್ರೋತ್ಸಾಹ ಧನವನ್ನು ಕೊಟ್ಟಿದ್ದಾರೆ, ಪ್ರಧಾನಿಗಳು ಈಗಾಗಲೇ ಪ್ರತಿ ಯೊಬ್ಬರಿಗೂ 20 ಲಕ್ಷ ರೂಪಾಯಿ ಕೊಟ್ಟಿದ್ದಾರೆ, ನಮ್ಮ ರಾಜ್ಯದವರೇ ಹೋಗಿರುವಾಗ ದಯಮಾಡಿ ಅವರಿಗೆ ಸರ್ಕಾರ ಪ್ರೋತ್ಸಾಹ ಕೊಡಬೇಕು. ಇದು ಹೆಮ್ಮೆಯ ವಿಚಾರ ಎರಡನೆಯದು ನಮಗೆಲ್ಲರಿಗೂ ನೋವಾಗಿರುವಂತಾದ್ದು

ಈ ವುಮೆನ್ಸ್ ಹಾಕಿಯ ಮಾಜಿ ಕೋಚ್‌ರವರು ಕೊಡಗಿನಿಂದ ಇಲ್ಲಿಗೆ ಬರತಕ್ಕಂಥ ಸಂದರ್ಭದಲ್ಲಿ ಅಪಘಾತವಾಗಿ ಅವರ ಬಲಗೈ ಕಳೆದುಕೊಂಡಿರುವ ಹೃದಯ ವಿದ್ರಾವಕ ಘಟನೆಯ ವರದಿಯನ್ನು ನಮ್ಮ ಪತ್ರಿಕಾ ಮಿತ್ರರು ಮಾಡಿದ್ದಾರೆ. ಅವರೀಗ ಬಹಳ ಕಷ್ಟದಲ್ಲಿದ್ದಾರೆ, ನೀವು ಶ್ರೀಮತಿ ಕುಸುಮಾಕರ ದೇಸಾಯಿ ಯವರಿಗೆ 20 ಲಕ್ಷ ರೂಪಾಯಿ ವೆಚ್ಚದ ಪ್ಲಾಟ್ ಕೊಂಡುಕೊಳ್ಳುವುದಕ್ಕೆ ದುಡ್ಡುಕೊಟ್ಟಿರುವವರು ಪಾಪ ದೇಶಕೋಸ್ಕರ ಆಡಿದಂತಹ ಒಬ್ಬ ಕೋಚ್ ಕೈ ಕಳೆದುಕೊಂಡು ಹೊಟ್ಟಿಗಾಗಿ ನಾನು ಎನೂ ಮಾಡುವುದಕ್ಕೆ ಆಗುವುದಿಲ್ಲವೆಂದು ಅಲೆದಾಡುತ್ತಿದ್ದಾರೆ ಅವರ ಬಗ್ಗೆ ಎಕೆನಿಮ್ಮ ಸರ್ಕಾರದವರು ಇನ್ನೂ ಯೋಚನೆ ಮಾಡಿಲ್ಲ? ನಾನು ತಮಗೆ ಒಂದು ಸಲಹೆ ಕೊಡುತ್ತೇನೆ. ನಾವು ಮಂತ್ರಿಗಳಾಗಿದ್ದಾಗ ಮಾಡುತ್ತಿದ್ದೇವು ತಮ್ಮಲ್ಲಿ ಈಗಲೂ ಕೆಲವರು ಮಾಡುತ್ತೀರಿ, ವಾಚಕರ ವಾಣಿಯಲ್ಲಿ ಬಂದಿದ್ದನ್ನು ಗುರುತು ಮಾಡಿ ಸಂಬಂಧಪಟ್ಟ ಇಲಾಖೆಗೆ ಕಳುಹಿಸುತ್ತಾರೆ. ಅದನ್ನು ಪ್ರತಿನಿತ್ಯ ತಾವು ಗಮನಿಸಬೇಕು. ಗಮನಿಸುವುದರ ಜೊತೆಗೆ ನಿಮ್ಮ ನಿಮ್ಮ ಕಾರ್ಯದರ್ಶಿಗಳಿಗೆ ಹೇಳಿ ತಕ್ಷಣ ಇವುಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ತಾವು ದಯವಿಟ್ಟು ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ, ಬಹಳ ಹಣವನ್ನು ಕೇಂದ್ರ ಸರ್ಕಾರದವರು ಎಷ್ಟು ಕೊಟ್ಟಿದ್ದಾರೆ ಬೇರೆ ರಾಜ್ಯ ಸರ್ಕಾರದವರು ಎಷ್ಟು ಕೊಟ್ಟಿದ್ದಾರೆ ಅಷ್ಟೇ ಹಣವನ್ನು ನಮ್ಮ ಕ್ರೀಡಾಪಟುಗಳಿಗೆ ಕೊಡಬೇಕೆನ್ನುವ ಒತ್ತಾಯವನ್ನು ಸರ್ಕಾರದಲ್ಲಿ ಮಾಡುತ್ತೇನೆ ಮತ್ತು ಅವರಿಗೆ ತಾವು ಭೇಟಿ ಮಾಡಿ ಅವರ ಪರಿಸ್ಥಿತಿ ಎನು ಎಂದು ತಿಳಿದುಕೊಂಡು ಕೊಡಗಿನಿಂದ ಬಂದಿರತಕ್ಕಂಥ ಕೋಚ್‌ಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

7.40 ಪಿಎಂ

ಯಾವರೀತಿ ಸರ್ಕಾರದಿಂದ ಸಹಾಯ ಕೊಡಬಹುದೆಂಬುದನ್ನು ವಿಚಾರ ಮಾಡಿ ಅವರಿಗೆ ಸಹಕಾರ ಕೊಡಬೇಕು. ಮಾನ್ಯ ಅಧ್ಯಕ್ಷರೇ, ತಾವೇನು ಈ ಪ್ರಸ್ತಾವನೆಯನ್ನು ಮುಂದೆ ಇಟ್ಟಿದ್ದೀರಿ, ಅದನ್ನು ನಾನು ಸ್ವಾಗತ ಮಾಡಿ, ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಪಾಟೀಲ್ ಶಿವಾನಂದ: ಸಿದ್ದಾರಾಮೆಗೌಡ ಮಾನ್ಯ ಉಪಾಧ್ಯಕ್ಷರೇ, ಬೆಳಿಗ್ಗೆ ನಾವು ಮತ್ತು ಮಾನ್ಯ ಸಿಂಧ್ಯರವರು ಇದನ್ನೇ ಪ್ರಸ್ತಾಪ ಮಾಡಿದ್ದೇವು. ಆದರೆ, ಆ ಸಂದರ್ಭದಲ್ಲಿ ಬಹುತೇಕ ಸರ್ಕಾರದವರು ಮರೆತ್ತಿದ್ದೀರಿ ಎಂದು ನನಗನಿಸುತ್ತದೆ. ಇದನ್ನು ಏಕೆ ಚ್ಲಾಘಕ ಮಾಡಿದ್ದೇವೆಂದರೆ, ನಿನ್ನೆಯಲ್ಲ ಮೊನ್ನೆ ಟಿ.ವಿ.ಯಲ್ಲಿ ಯಾವ ದಿವಸ ರಿಸಲ್ಟ್ ಫೈನಲ್ ಆಯಿತು, ಆ ದಿವಸ ತಾರು ಟಿ.ವಿ.ಯಲ್ಲಿ ನೋಡಿದಿರೋ ಇಲ್ಲವೋ ಈ-ಟಿ.ವಿ.ಯಲ್ಲಿ ನ್ಯೂಸ್ ಬಂತು. ಪದಕ ಪಡೆದಂಥವರೇ ನಮ್ಮವರೊಬ್ಬರು ಕ್ರಿಟಿಸೈಸ್ ಮಾಡಿದರು. ಇಡೀ ದೇಶದಲ್ಲಿ ಯಾವ ಯಾವ ರಾಜ್ಯದವರು ಚಿನ್ನದ ಪದಕವಾಗಲೀ, ಕಂಚಿನ ಪದಕವಾಗಲೀ ತೆಗೆದುಕೊಂಡು ಬರುತ್ತೇವೆ, ನಮ್ಮನ್ನೆಲ್ಲಾ ಸ್ವಾಗತ ಮಾಡುತ್ತಾರೆ. ಆದರೆ ನಮ್ಮ ಕರ್ನಾಟಕದವರು ಸೌಜನ್ಯತೆಗೂ ಒಂದು ಮಾತು ನಮ್ಮನ್ನು ಮಾತನಾಡಿಸಲಿಲ್ಲ ಎಂದು ಹೇಳಿ ನೋವು ವ್ಯಕ್ತಪಡಿಸಿದರು. ಆದಕ್ಕಾಗಿ, ನಾವು ಬೆಳಿಗ್ಗೆ ಅಧ್ಯಕ್ಷರಿಗೆ ನೋಟೀಸ್ ಕೊಟ್ಟಿದ್ದೇವು, ಬಹುತೇಕ ನಿಮಗೂ ಹೇಳಿದ್ದಾರೆಂದು ಅಂದುಕೊಂಡಿದ್ದೇವೆ. ನೀವು ಮರೆತ್ತಿದ್ದಿರಿ, ನಮಗೆ ಗೊತ್ತಿದೆ.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ (ಯುವಜನ ಸೇವಾ ಸಚಿವರು) : ಓಲಂಪಿಕ್ ಅಸೋಸಿಯೋಷನ್‌ನಿಂದ ಅವರಿಗೆ ಸ್ವಾಗತವನ್ನು ಕೋರಲಿಕ್ಕೆ ಮತ್ತು ಪ್ರತಿಯೊಬ್ಬರಿಗೂ...

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಅದಕ್ಕೆ, ದಯಮಾಡಿ ಇನ್ನು ಮೇಲಾದರೂ ತಾವು ಮರೆಯಬೇಡಿ. ನಮ್ಮ ವಿನಂತಿ ಇಷ್ಟೆ ಏಕೆಂದರೆ, ನಾವು ಇನ್ನೂ ಹೆಚ್ಚಿಗೆ ಸಾಧನೆ ಮಾಡಬಹುದಿತ್ತು. ಉದಾಹರಣೆಗೆ, ಬಿಜಾಪುರದ ಸೈಕ್ಲಿಸ್ಟ್ ಬಗ್ಗೆ ನಿಮಗೆ ಜ್ಞಾಪಕ ಮಾಡುತ್ತೇನೆ. ತಾವು ಒಂದು ಸಾರಿ ಬಿಜಾಪುರಕ್ಕೆ ಬಂದಿದ್ದಿರಿ, ತಮಗೆ ಗೊತ್ತಿದೆ. ನಮ್ಮರಾಜ್ಯದವರು ಇವತ್ತು ರಾಷ್ಟ್ರದಲ್ಲಿಯೇ ಸೈಕ್ಲಿಂಗ್‌ನಲ್ಲಿ ಮೊದಲನೇ ಸ್ಥಾನ, ಎರಡನೇ ಸ್ಥಾನ ಮತ್ತು ತೃತೀಯ ಸ್ಥಾನವನ್ನು ತೆಗೆದುಕೊಂಡಿದ್ದಾರೆ. ನೀವು ನಾಲ್ಕು ವರ್ಷದ ಇತಿಹಾಸವನ್ನು ತೆಗೆದುಕೊಳ್ಳಿ, ಅವರು ತರುತ್ತಲೇ ಇದ್ದಾರೆ. ನಿಮ್ಮಿಂದ, ಅವರಿಗೆ ಸೌಜನ್ಯಕ್ಕಾದರೂ ಪ್ರೋತ್ಸಾಹ ಧನ ಸಿಕ್ಕಿದರೆ ಸಾಕಾಗಿತ್ತು. ಕೊನೇಪಕ್ಷ ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಂಡೆ ಸಿಂಡರ್ ಟ್ರಾಕ್ ಆದರೂ ಬಿಜಾಪುರದಲ್ಲಿ ಮಾಡಿಸಿಕೊಡಿ ಎಂದು ಕೇಳಿದೆ. ಸ್ವಾಮಿ, ನೀವು ಯಾರಿಗೆ ಕಾಂಟ್ರಾಕ್ಟ್ ಕೊಟ್ಟಿರೋ ಗೊತ್ತಿಲ್ಲ. 60 ಲಕ್ಷ ರೂಪಾಯಿ ಕಾಂಟ್ರಾಕ್ಟ್ ಕೊಟ್ಟಿರಿ, ಆ ಕೇಸ್ ಇವತ್ತು ಸಿ.ಒ.ಡಿ.ಗೆ ಹೋಗಿದೆ. ಸಬ್ ಸ್ಟಾಂಡರ್ಡ್ ಕನ್‌ಸ್ಟ್ರಕ್ಷನ್ ಆಗಿದೆ. ಇದು ನಿಮಗೂ ಗೊತ್ತಿರಬಹುದು, ನಾವು ಬಹಳ ನೋವಿನಿಂದ ಹೇಳುತ್ತೇವೆ.

ಶ್ರೀ ಎನ್.ಯೋಗೀಶ್ ಭಟ್ :ಕೇಂದ್ರ ಸರ್ಕಾರದ ಅನುದಾನ ಏಳು ಕೋಟಿ ರೂಪಾಯಿಗಳನ್ನು ವ್ಯರ್ಥ ಆಗಿದೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಏಳು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಮ್ಯಾಚಿಂಗ್ ಗ್ರಾಂಟ್ ಕೊಡುತ್ತಾರೆ. ಸರ್ಕಾರದವರು ಸೌಜನ್ಯಕ್ಕೆ ಸ್ವಲ್ಪ ಪಾರ್ಟಿಸಿಪೇಟ್ ಮಾಡಿದ್ದರೆ ನಮ್ಮ ರಾಜ್ಯದ ಕ್ರೀಡಾಪಟುಗಳು ರಾಷ್ಟ್ರಮಟ್ಟ ಅಲ್ಲ, ಅಂತರ್ ರಾಷ್ಟ್ರೀಯ ಮಟ್ಟಕ್ಕೆ ಹೋಗತಕ್ಕ ಕೇಪಬಲ್ ಇದ್ದಾರೆ. ನಮ್ಮಲ್ಲಿ ಒಬ್ಬರು ಸಾಹಿತಿಗಳು ಒಂದು ಗಾದೆ ಮಾತು ಹೇಳುತ್ತಿದ್ದರು. ಸ್ವಾತಂತ್ರ ್ಯ ಸಿಕ್ಕಮೇಲೆ ಎರಡೇ ಎರಡು ಗುರಿ ಸಾಧಿಸಿದ್ದೇವೆಂತೆ. ಮೊದಲನೇ ಗುರಿ ಎಂದರೆ. ಸಂತಾನೋತ್ಪತ್ತಿ ಮಾಡುವುದು, ಎರಡನೇ ಗುರಿ ಭಯೋತ್ಪಾದನೆ ಮಾಡುವುದು. ಈ ಎರಡನ್ನೂ ಮೀರಿಸಿ, ಇವತ್ತು ನಮ್ಮ ದೇಶದವರು ಹೊಸದನ್ನು ಮಾಡಿದ್ದಾರೆ. ದಯಮಾಡಿ ಇನ್ನಾದರೂ ತಾವು ಎಚ್ಚೆತ್ತು ಸ್ವಲ್ಪವಾದರೂ ಸಹಾಯ ಮಾಡಿದರೆ ಒಳ್ಳೆಯದು. ನಿಮ್ಮ ಡಿಪಾರ್ಟ್‌ಮೆಂಟ್‌ನವರು ಒಂದು ಸೈಕಲ್ ಕೂಡ ಕೊಡಿಸುವುದಾಗಿಲ್ಲ. ನಮ್ಮ ಜಿಲ್ಲೆಗೆ ನಾವು ಡಿ.ಸಿ.ಸಿ.ಬ್ಯಾಂಕಿನಿಂದ 10 ಲಕ್ಷ ರೂಪಾಯಿ ಕೊಡುತ್ತಿದ್ದೇವೆ. ದಯಮಾಡಿ, ಇನ್ನು ಮೇಲಾದರೂ ತಾವು ಎಚ್ಚೆತ್ತು ಸ್ವಲ್ಪ ಕಾರ್ಯಕ್ರಮ ಮಾಡಿದರೆ, ನಾವು ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಮಾನ್ಯ ಅಧ್ಯಕ್ಷರೇ, ಇವತ್ತು ತಾವು ಮೂವ್ ಮಾಡಿರತಕ್ಕ ನಿರ್ಣಯ ಏನಿದೆ ಇದಕ್ಕೆ ಸರ್ವಾನುಮತದಿಂದ ಸಹಕಾರ ಕೊಡುತ್ತೇವೆ ಮತ್ತು ಹರ್ಷವನ್ನು ವ್ಯಕ್ತ ಪಡಿಸುತ್ತೇವೆ.

ಶ್ರೀ ಎ.ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) : ಪಾಟೀಲರಿಗೆ, ನಾನು ಅವರು ಹೇಳಿದ್ದನ್ನು ಸ್ವಾಗತ ಮಾಡುತ್ತೇನೆ. ಹಿಂದೆ 1987 ಅಥವಾ 1988ರಲ್ಲಿ ಸಿಯೋಲ್‌ನಲ್ಲಿ ಆದಾಗ ವಂದನಾರವ್ ಎಂಬ ಏಕೈಕ ಮಹಿಳೆ ಚಿನ್ನದ ಪದಕ ತಂದಿದ್ದಾರೆ. ಆಗ ಸರ್ಕಾರ ಏನೂ ಮಾಡಲಿಲ್ಲ. ಹಾಗಾಗುವುದು ಬೇಡ. ಇದು ನನಗೆ ಗೊತ್ತು, ಇದೇ ಅಸೆಂಬ್ಲಿಯಲ್ಲಿ ಇದ್ದೆ. ಅವತ್ತು

ನಾನೂ ಕೂಡ, ನೀವು ಪ್ರಸ್ತಾಪ ಮಾಡಿದರೀತಿಯೇ ಮಾಡಿದ್ದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಚೀಫ್ ಮಿನಿಸ್ಟರ್ ಇದ್ದರು.

ಶ್ರೀ ಸಿ.ಚೆನ್ನಿಗಪ್ಪ : ಅವತ್ತು ಈ ರೀತಿಯ ಪ್ರಶ್ನೆ ಮಾನ್ಯ ಸಚಿವರು ಕೇಳಿರಲಿಲ್ಲ. ಅವರು ಈ ಕಡೆ ಕುಳಿತಿದ್ದಾಗ, ನಮ್ಮ ನಾಯಕರು ಹೇಳಿದರೀತಿ ಕೊಡಿ ಎಂದು ಯಾವುದೂ ಕೇಳಿರಲಿಲ್ಲ. ಅದಕ್ಕಾಗಿ ಕೊಟ್ಟಿರಲಿಲ್ಲ ಅಷ್ಟೆ. ನೀವು ರೂಲ್ಸ್ ಮಾಡಿದ್ದೀರಾ?

ಶ್ರೀ ಎ.ಕೃಷ್ಣಪ್ಪ : ನಾವು ಅವರಿಗೆ ಸನ್ಮಾನ ಮಾಡಿ ಎಂದು ಕೇಳಿ, ನೀವು ಏನೂ ಮಾಡದಿದ್ದ ಕಾರಣ ವಂದನಾರಾವ್‌ರವರನ್ನು ನಾವು ಕರೆದುಕೊಂಡು ಬಂದು, ಪಬ್ಲಿಕ್ ಪ್ರೊಸೆಷನ್ ಮಾಡಿ, ಸನ್ಮಾನ ಮಾಡಿ ಕಳುಹಿಸಿದ್ದೇವೆ. you must know this;,

ಶ್ರೀ ಬಿ.ಹೆಚ್.ಬನ್ನಿಕೋಡ್ :ಒಬ್ಬರಿಗೊಬ್ಬರು ನ್ಯೂನತೆಗಳನ್ನು ಎತ್ತಿ ತೋರಿಸುವುದು ಬೇಡ. ಏನು ಸಲಹೆ ಕೊಟ್ಟಿದ್ದಾರೆ, ಆ ಸಲಹೆಗಳ ಬಗ್ಗೆ ಗಮನ ಕೊಡಿ.

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ಇವತ್ತೇನು ನಮ್ಮ ರಾಜ್ಯದ ಕ್ರೀಡಾಪಟುಗಳು ಹೊರದೇಶದಲ್ಲಿ ಅತ್ಯುತ್ತಮವಾದ ಸಾಧನೆ ಮಾಡಿದ್ದಾರೆ, ಇದರ ಬಗ್ಗೆ ಈಗಾಗಲೇ ನಮ್ಮ ನಾಯಕರು ಹೇಳಿದಹಾಗೆ 20 ಲಕ್ಷವಾಗಬಹುದು 30 ಲಕ್ಷವಾಗಬಹುದು. ಸರ್ಕಾರದಿಂದ ಕೊಡುವಂಥ ಕೊಡುಗೆ ಏನಿದೆ, ಅದನ್ನು ಅವರ ಉತ್ತಮವಾದ ಸೇವೆಗೆ ಕೊಡುವುದು ನಮ್ಮ ಕರ್ತವ್ಯವಾಗಿದೆ. ದಯಮಾಡಿ, ಅವರ ಮನಸ್ಸು ಇನ್ನೂ ಹೆಚ್ಚುವ ರೀತಿಯಲ್ಲಿ ಸರ್ಕಾರ ಪ್ರೋತ್ಸಾಹ ಕೊಡಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡುತ್ತೇನೆ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ : ಮ್ಯಾಂಚಿಸ್ಟೆರ್‌ನಲ್ಲಿ ನಡೆದಂಥ 17ನೇ ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿ ನಮ್ಮ ಭಾರತ ಒಳ್ಳೆಯ ಸಾಧನೆಯನ್ನು ಮಾಡಿದೆ. ಅದರಲ್ಲಿ ಮುಖ್ಯವಾಗಿ 148 ಕ್ರೀಡಾ ಪಟುಗಳು ಭಾಗವಹಿಸಿ, ಒಟ್ಟು 32 ಸ್ವರ್ಣಪದಕ ಮತ್ತು 21 ಬೆಳ್ಳಿ ಪದಕ, 19 ಕಂಚಿನ ಪದಕ ಹೀಗೆ ಒಟ್ಟು 72 ಪದಕಗಳನ್ನು ನಮ್ಮ ಭಾರತಕ್ಕೆ ತಂದುಕೊಟ್ಟಿದ್ದಾರೆ. ಅವರೆಲ್ಲರಿಗೂ ಕರ್ನಾಟಕ ರಾಜ್ಯದಿಂದ ಅಭಿನಂದನೆಗಳನ್ನು ಸಲ್ಲಿಸುತ್ತಾ ಇರುವುದು ಬಹಳ ಹೆಮ್ಮೆಯ ವಿಚಾರ. ಈಗತಾನೆ ಸನ್ಮಾನ್ಯ ಸಿಂಧ್ಯರವರು ನಮ್ಮ ಕ್ರೀಡಾಪಟುಗಳಿಗೆ ಕೇಂದ್ರ ಸರ್ಕಾರದಿಂದ ಗೋಲ್ಡ್ ಮೆಡಲ್‌ಗೆ 20 ಲಕ್ಷ ರೂಪಾಯಿ, ಕಂಚಿನ ಪದಕಕ್ಕೆ 15 ಲಕ್ಷ ರೂಪಾಯಿ ಮತ್ತು 10 ಲಕ್ಷ ರೂಪಾಯಿಗಳನ್ನು ಅನೌನ್ಸ್ ಮಾಡಿದ್ದಾರೆ. ಆ ನಿಟ್ಟಿನಲ್ಲಿ ಇಂದು ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಇದರ ಬಗ್ಗೆ ಮಾತನಾಡಿದ್ದೇವೆ. ಅವರು ಅಪ್ರೂವ್‌ಮಾಡಿದ್ದಾರೆ. ಕರ್ನಾಟಕ ರಾಜ್ಯದ ವತಿಯಿಂದ 25-7-2002 ರಿಂದ 4-8-2002ರ ವರೆಗೆ ಇಂಗ್ಲೇಂಡ್‌ನಲ್ಲಿ ನಡೆದ 17ನೇ ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿ ಕರ್ನಾಟಕ ಮತ್ತು ಭಾರತವನ್ನು ಪ್ರತಿನಿಧಿಸಿದ ಕ್ರೀಡಾ ಕೂಟದ ಕ್ರಮವಾಗಿ ಚಿನ್ನ ಹಾಗೂ ಕಂಚಿನ ಪದಕಗಳನ್ನು ಗಳಿಸಿದ ರಾಷ್ಟ್ರಕ್ಕೆ ಹಾಗೂ ರಾಜ್ಯಕ್ಕೆ ಕೀರ್ತಿ ತಂದಿರುವ ಶ್ರೀ ಸತೀಶ್ ರೈ, ಭಾರ ಎತ್ತುವ ಸ್ಪರ್ಧೆ ಎರಡು ಚಿನ್ನ ಮತ್ತು ಒಂದು'ಕಂಚು ಇದೆ. ಆದರೆ ಅದು ಸ್ವಲ್ಪ ಲಿಟಿಗೇಷನ್‌ನಲ್ಲಿದೆ. ಕುಮಾರಿ ಎಲ್ ಎನ್ ಮೇರಿ, ಮಹಿಳಾ ಹಾಕಿ

ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ತಂದಿದ್ದಾರೆ. ಶ್ರೀ ಸುದೀರ್ ಕುಮಾರ್ ಭಾರ ಎತ್ತುವ ಸ್ಪರ್ಧೆಯಲ್ಲಿ, ಕುಮಾರಿ ಅಪರ್ಣಾ ಪೊಪೆಟ್‌ರವರು ಬ್ಯಾಡ್ಮಿಂಟನ್‌ನಲ್ಲಿ ಚಿನ್ನದ ಪದಕ, ಚೇತನ್ ಬಿ. ಬಬ್ಬೂರ್‌ರವರು ಟೆನ್ನಿಸ್‌ನಲ್ಲಿ ಕಂಚಿನ ಪದಕ ತಂದಿದ್ದಾರೆ. ಈ ಒಂದು ವೈಯಕ್ತಿಕ ಸ್ಪರ್ಧೆಗಳಲ್ಲಿ ಬಹುಮಾನವನ್ನು ಮಾನ್ಯ ಮುಖ್ಯಮಂತ್ರಿಗಳು ಚಿನ್ನದ ಪದಕ ಗಳಿಸಿದವರಿಗೆ ಐದು ಲಕ್ಷ ರೂಪಾಯಿ, ಬೆಳ್ಳಿ ಪದಕ ಗಳಿಸಿದವರಿಗೆ ಮೂರು ಲಕ್ಷ ರೂಪಾಯಿ ಮತ್ತು ಕಂಚಿನ ಪದಕ ಗಳಿಸಿದವರಿಗೆ ಒಂದುವರೆ ಲಕ್ಷ ರೂಪಾಯಿ ಮತ್ತು ಇದೇ ರೀತಿ ಸಾಮೂಹಿಕ ಸ್ಪರ್ಧೆಯ ಪ್ರತಿಯೊಬ್ಬರಿಗೂ ಚಿನ್ನದ ಪದಕಕ್ಕೆ ಎರಡು ಲಕ್ಷ ರೂಪಾಯಿ, ಬೆಳ್ಳಿ ಪದಕಕ್ಕೆ ಒಂದು ಲಕ್ಷ ರೂಪಾಯಿ ಮತ್ತು ಕಂಚಿನ ಪದಕಕ್ಕೆ 50 ರೂಪಾಯಿಗಳನ್ನು ಕೊಡುವಂಥ ತೀರ್ಮಾನವನ್ನು ಇವತ್ತು ತೆಗೆದುಕೊಂಡಿದ್ದೇವೆ. ಹಾಕಿ ಕೋಚ್ ಬಗ್ಗೆ ಸನ್ಮಾನ್ಯ ಸಿಂಧ್ಯರವರು ಹೇಳಿದ್ದಾರೆ. ಅದರ ಬಗ್ಗೆಯೂ ನಾಳೆ ಅಥವಾ ನಾಡಿದ್ದರಲ್ಲಿ ಕೇಳಿ, ಏನಾಗಿದೆ ಎಂಬುದರ ಬಗ್ಗೆ ನಾನು ಸಮಾಲೋಚನೆ ಮಾಡುತ್ತೇನೆ. ಮಾನ್ಯ ಪಾಟೀಲರು ಬಿಜಾಪುರ ಬಗ್ಗೆ ಹೇಳಿದರು. ಇದರಲ್ಲಿ ಸೈಕ್ಲಿಸ್ಟ್ ಪರವಾಗಿ ವೇಲೋಡ್ರಮ್ ಪ್ರಾರಂಭ ಮಾಡಬೇಕೆಂಬ ನಿಟ್ಟಿನಲ್ಲಿ ಅವರು ಮಾತನಾಡುತ್ತಾ ಹೇಳಿದರು. ನಾನು ಈ ಹಿಂದೆ ಎರಡು ಮೂರು ಸಾರಿ ಬಿಜಾಪುರಕ್ಕೆ ಹೋದಾಗಲೂ, ಅವರ ಜೊತೆಯಲ್ಲಿ ಸ್ಟೇಡಿಯಂಗೂ ಹೋಗಿ ಬಂದಿದ್ದೇನೆ. ಮುಖ್ಯವಾಗಿ ಟೆಂಪರರಿ ವೇಲೋಡ್ರಮ್ ಮಾಡುವುದಕ್ಕಾಗಿ 20 ಲಕ್ಷ ರೂಪಾಯಿಗಳ ಅನುದಾನವನ್ನೂ ಬಿಡುಗಡೆ ಮಾಡಿದ್ದೆ. ಹೀಗೆ ಟೆಂಪೊರರಿಯಾಗಿ ಆ ಕೆಲಸವನ್ನು ಏನು ಪ್ರಾರಂಭ ಮಾಡಿದ್ದಾರೆ, ಅದರಲ್ಲಿ ಕೋಚಿಂಗ್ ಕ್ಲಾಸ್‌ನಡೆಯುತ್ತಾ ಇದೆ. ಆದರೆ ವೇಲೋಡ್ರಮ್ ಮಾಡಲು ಜಾಗದ ಅವಶ್ಯಕತೆ ಇದೆ, ಅದು ನಮ್ಮ ಹೋಂ ಡಿಪಾರ್ಟ್‌ಮೆಂಟ್‌ನಲ್ಲಿರುವುದರಿಂದ ಆದಷ್ಟು ಬೇಗ ಆ ಜಾಗವನ್ನು ಟ್ರಾನ್ಸ್‌ಫರ್ ಮಾಡಿಕೊಡಿ ಎಂದು ನಾನು ತಮ್ಮ ಹತ್ತಿರ ಕೂಡ ಕೇಳಿದ್ದೇನೆ. ಆ ನಿಟ್ಟಿನಲ್ಲಿ ನೀವು ಆದಷ್ಟು ಬೇಗ ಜಾಗದ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಆದಷ್ಟು ಬೇಗ ನಾವು ಪ್ರಾರಂಭ ಮಾಡಲು ಮತ್ತು ಕೇಂದ್ರ ಸರಕಾರದಿಂದ ಅನುದಾನವೇನು ಬರುತ್ತದೆ, ಅದನ್ನು ಪಡೆಯುವ ಬಗ್ಗೆಯೂ ನಾವು ಮುಂದಾಗುತ್ತೇವೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಮಾನ್ಯ ಅಧ್ಯಕ್ಷರೇ, ತಾವುಗಳು ಬಂದಿರತಕ್ಕಂಥಾದ್ದು ಎರಡು ವರ್ಷಗಳ ಹಿಂದೆ. ಆ ಸಂದರ್ಭದಲ್ಲಿ ನಾವು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇವು. ತಪ್ಪು ಅವರ ಇಲಾಖೆಯಲ್ಲಿ ಆಗಿದೆ. ಸರಕಾರವು ನಮ್ಮ ಕೈಯಲ್ಲಿಲ್ಲ, ನಿಮ್ಮ ಕೈಯಲ್ಲಿದೆ. ಹೋಂ ಡಿಪಾರ್ಟ್‌ಮೆಂಟ್‌ನಿಂದ ಜಾಗದ ಬಗ್ಗೆ ಅಪ್ರೂವಲ್ ಕೊಡಿಸಿ, ನಾವು ನೀವು ಕೊಡದಿದ್ದರೂ ಮಾಡಿಸುತ್ತೇವೆ ಎಂದು ಹೇಳಿದ್ದೆವು. ಸ್ಥಳನ್ನು ತೋರಿಸಿದ್ದೇವೆ, ಆಗ ಅಲ್ಲಿಂತಕ್ಕಂಥ ಎಸ್‌ಪಿ ಯವರು ಜಾಗವನ್ನು ಕೂಡ ಕೊಟ್ಟರು. ಕಡಿಮೆ ಪಕ್ಷ ನಮ್ಮ ಹೋಂ ಸೆಕ್ರೆಟರಿ ಯವರನ್ನು ಹಿಡಿದುಕೊಂಡು ಅದನ್ನು ಅಪ್ರೂವ್ ಮಾಡಿಸುವ ಕೆಲಸವನ್ನು ಎರಡು ವರ್ಷಗಳಿಂದ ಮಾಡಲು ಇವರಿಂದ ಆಗಲಿಲ್ಲ.

ಶ್ರೀಎಸ್.ಎಸ್.ಮಲ್ಲಿಕಾರ್ಜುನ್ : ತಾವುಗಳು ಅಸೆಂಬ್ಲಿಯಲ್ಲಿ ಅಷ್ಟೇ ಅಲ್ಲ, ಹೊರಗಡೆಯಿಂದ ಸ್ವಲ್ಪ ಫಾಲೋಅಪ್ ಮಾಡಿದ್ದರೆ ಇಷ್ಟೊತ್ತಿಗೆ ಕೆಲಸವನ್ನು ಪ್ರಾರಂಭ ಮಾಡುತ್ತಿದ್ದೆವು.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡಾ : ನಾವು ಹೋಂ ಸೆಕ್ರೆಟರಿಯವರಿಂದ ಫೈಲ್‌ನ್ನು ತಂದು ಮುಟ್ಟಿಸಿದ ಮೇಲೆಯೂ ಮುಂದೆ ನೀವು ಮಾಡದಿದ್ದರೆ

ಉಪಾಧ್ಯಕ್ಷರು : ಅವರು ಮಾಡುತ್ತೇವೆಂದು ಹೇಳಿದ್ದಾರಲ್ಲವೇ ... ಸಾಕು.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಮಾನ್ಯ ಉಪಾಧ್ಯಕ್ಷರೇ, ಸ್ಪೇಡೀಯಂನಲ್ಲಿರತಕ್ಕಂಥ ವೇಲೋಡ್ರಮ್ ಏನಿದೆ, ಅದನ್ನು ಟೆಂಪೊರರಿ ವೇಲೋಡ್ರಮ್ ಮಾಡುತ್ತೇವೆಂದು ಹೇಳಿದ್ದಾರಲ್ಲಾ ಅದನ್ನು ದೆಹಲಿಯ ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ ಕಾಂಟ್ರಾಕ್ಟ್‌ನ್ನು ಕೊಟ್ಟಿದ್ದಾರೆ. ಅವರು ಒಟ್ಟಾರೆ ನಲವತ್ತು ಲಕ್ಷ ರೂಪಾಯಿಗಳನ್ನು ಅದಕ್ಕೆ ಎಸ್ಟಿಮೇಟ್ ಮಾಡಿದ್ದಾರೆ. ಅದರಲ್ಲಿ 20 ಲಕ್ಷ ರೂಪಾಯಿಗಳನ್ನು ಡ್ರಾ ಮಾಡದೇ ಅರ್ಧಕ್ಕೆ ಓಡಿ ಹೋಗಿ ಬಿಟ್ಟಿದ್ದಾರೆ. ಈಗ ಅದು ಸಿಒಡಿಗೆ ರೆಫರ್ ಆಗಿದೆ. ಅದು ಅವರಿಗೆ ಗೊತ್ತಿದೆಯೋ ಇಲ್ಲವೊ ಎಂಬುದು ನನಗೆ ಗೊತ್ತಿಲ್ಲ. ಅದರ ವಿವರಗಳನ್ನು ಪಡೆದುಕೊಂಡು ನಮಗೆ ಹೇಳಿ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೇ, ವೇಲೋಡ್ರಮ್ ಬಗ್ಗೆ ನಾನು ಹೋಂ ಡಿಪಾರ್ಟ್‌ಮೆಂಟ್‌ನವರ ಜೊತೆಗೆ ಮಾತನಾಡುತ್ತೇನೆ. ಹಾಗೆಯೇ ಸಿಂಡರ್‌ಟ್ರಾಕ್ ಬಗ್ಗೆ ತಾವುಗಳು ಹೇಳಿದ್ದೀರಿ. 60 ಲಕ್ಷ ರೂಪಾಯಿಗಳದ್ದು ಅದರಲ್ಲಿ 35 ರಿಂದ 40 ಲಕ್ಷ ರೂಪಾಯಿಗಳನ್ನು ಆ ಗ್ರೌಂಡ್ ಕಂಡೀಷನ್ ಮೇಲೆ ಕೇಂದ್ರ ಸರಕಾರದಿಂದ 1994ನೇ ಇಸವಿಯಲ್ಲಿಯೇ ಅನುದಾನ ಬಂದಿತ್ತು. ಅದನ್ನು ನಾವು ಕೇಂದ್ರ ಸರಕಾರದ ಏಜನ್ಸಿಗಳಾದಂಥ ಮೆಕಾರ್ ಸಂಸ್ಥೆಗೆ ಸಿಂಡರ್‌ಟ್ರಾಕ್ ಮಾಡುವುದಕ್ಕೆ ನಾವು ಆರ್ಡರ್‌ನ್ನು ಕೊಟ್ಟಿದ್ದೆವು. ಅದರಲ್ಲಿ ಕಳಪೆ ಕಾಮಗಾರಿಯಾಗಿದೆ ಎಂದು ನಮ್ಮ ಗಮನಕ್ಕೂ ಬಂದಿದೆ. ಅದನ್ನು ರ್‍ಯಾಟಿಫಿಕೇಶನ್ ಮಾಡುವುದಕ್ಕೆ ಅವರು ಸಮಯವನ್ನು ತೆಗೆದುಕೊಂಡಿದ್ದಾರೆ. ಶಿವಮೊಗ್ಗ, ಮಂಗಳೂರು , ಬಿಜಾಪುರ, ಬಳ್ಳಾರಿಯಲ್ಲಿಯೂ ಹೀಗೆ ಆಗಿದೆ. ಹಾಗಾಗಿ ನಾವು ಮೆಕಾನ್ ಸಂಸ್ಥೆಯವರಿಗೆ ನೋಟೀಸ್‌ನ್ನು ಕೊಟ್ಟಿದ್ದೇವೆ. ಆ ಬಗ್ಗೆ ಎರಡು ಮೂರು ಮೀಟಿಂಗ್‌ಗಳನ್ನು ಕೂಡ ಮಾಡಿದ್ದೇವೆ. ಆ ಪ್ರಕಾರ ಅದಷ್ಟು ಬೇಗ ರ್‍ಯಾಟಿಫೈ ಮಾಡುತ್ತೇವೆಂದು ಅವರು ಒಪ್ಪಿಕೊಂಡಿದ್ದಾರೆ. ಅವರು ಅದಷ್ಟು ಬೇಗನೆ ಅದನ್ನು ಮಾಡಿ ಮುಗಿಸುತ್ತಾರೆ.

ಶ್ರೀ ಎನ್.ಯೋಗೀಶ್ ಭಟ್ :ಮಾನ್ಯ ಅಧ್ಯಕ್ಷರೇ, ಸಿಂಡರ್ ಟ್ರಾಕ್ ಏಳು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹಾಳಾಗಿದ್ದನ್ನು ದುರಸ್ತಿಗೊಳಿಸುವ ಕೆಲಸವನ್ನು ಯಾರಿಗೆ ಕೊಟ್ಟಿದ್ದೀರಿ? ಅದಕ್ಕೆ ಸರಕಾರದ ವೆಚ್ಚ ಇಲ್ಲವೇ?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ : ಮೆಕಾನ್ ಸಂಸ್ಥೆಯವರು ಮಾಡುತ್ತಾರೆ. ಹೆಚ್ಚು ಖರ್ಚು ಇಲ್ಲ...

ಉಪಾಧ್ಯಕ್ಷರು : ಈಗ ಎರಡು ಪ್ರಕಟಣೆಗಳು ಇವೆ.